೨೪. ಜಮಖಂಡಿಯಲ್ಲಿ ಓರ್ವ ವಕೀಲರ ಮೇಲೆ ದುರ್ವರ್ತನೆ ಮತ್ತು ಅದರಿಂದ ಉಂಟಾಗಿರುವ ಶಾಂತಿಭಂಗ ಪರಿಸ್ಥಿತಿ

ಶ್ರೀ ಆರ್. ವೆಂಕಟರಾವಯ್ಯ.—ಅಧ್ಯಕ್ಷರೆ, ನಾನು ಜಮಖಂಡಿ ವಿಚಾರದಲ್ಲಿ ತಿಳಿಸಿರ ಪ್ರಕಾರ ಕೇಳಿದಕ್ಕೆ ಮಾನ್ಯ ಗೃಹ ಮಂತ್ರಿಗಳು ಉತ್ತರ ಹೇಳಂತ್ತೇನೆಂದು ಹೇಳಿದ್ದರು.

ಶ್ರೀ ಬಿ. ರಾಚಯ್ಯ.—ಅಧ್ಯಕ್ಷರೆ, ನಾನು ತಮ್ಮ ಅಪ್ಪಣೆಯನ್ನು ಪಡೆದು ಈ ಕೆಳಕಂಡ ಹೇಳಿಕೆಯನ್ನು ಕೊಡುತ್ತಿದ್ದೇನೆ

ಶ್ರೀ ಲಕ್ಷ್ಮಣ್ ತಮ್ಮಣ್ಣ ಕೊಟಿಯಾಳ್ ಎಂಬುವರು ಜಮಖಂಡಿ ತಾಲ್ಲೂಕಿನ ತೊಡಲ್ಬಾಗಿ ಗ್ರಾಮದವರಾಗಿದ್ದು ರಬಕವಿಯ ಕಾಖಂಡ್ಕಿ ಕಂಟುಂಬದಲ್ಲಿ ವಂದುವೆಯಾಗಿರುವರು. ಕಾಖಂಡ್ಕಿಯವ ಗಂಗಪ್ಪ ಮಂತ್ತು ಆತನ ಸಹೋದರ ಕಾಖಂಡ್ಕಿ ರಾವಪ್ಪ ಇವರ ಮಧ್ಯೆ ಆಸ್ತಿಗಳ ಬಗ್ಗೆ ವಿವಾದ ಎದ್ದು ಅವರ ವಿರುದ್ಧ ಮೊಕದ್ದಮೆ ಮಂತ್ತು ಎದುರು ಮೊಕದ್ದಮೆಗಳನ್ನು ನೋಂದಾಯಿಸಲಾಗಿದೆ. ವಕೀಲರಾದ ಎಲ್.ಟಿ. ಕೋಟಿಯಾಲ್‌ರವರು ಕಾಖಂಡ್ಕಿಯವ ಗಂಗಪ್ಪನವರ ಪರವಾಗಿ ಭಾಗವಹಿಸಿ ಕಲ್ಲಪ್ಪ ಉಗಾರ್ ಮಂತ್ತು ಇಂಚಿಗೇರಿಮತ್‌ನ ಗೂಂಡಾ ವ್ಯಕ್ತಿಗಳ ಸಹಾಯದಿಂದ ಕಾಖಂಡ್ಕಿ ರಾಮಪ್ಪನವರ ಆಸ್ತಿಗೆ ತೀವ್ರ ಹಾನಿಯುಂಟು ಮಾಡಿರುವರು. ತೆರದಾಳ್ ಪೋಲೀಸ್ ಠಾಣೆಯಲ್ಲಿ ಎಲ್. ಟಿ, ಕೋಟಿಯಾಲ್ ಮಂತಕ್ಕ ಇತರರ ವಿರುದ್ಧ ಈ ಕೆಳಕಂಡ ಮೊಕದ್ದಮೆಗಳನ್ನು ದಾಖಲು ಮಾಡಲಾಗಿದೆ.

ಅಪರಾಧ ಸಂಖ್ಯೆ	ಕಲಂ	ವರದಿಯಾದ ದಿನಾಂಕ
೧೦೨/೮೫	೧೪೬, ೩೨೩, ೩೪೧, ೧೪೯ ಐಪಿಸಿ	೪-೧೧-೧೯೮೫
೨೭/೮೬	೧೬೫, ೧೪೮, ೩೨೩, ೫೦೪, ೪೩೫ ಐಪಿಸಿ	೨೭-೨-೧೯೮೬
೨೯/೮೬	೧೪೭, ೧೪೮, ೩೨೩, ೩೧೯, ೪೩೫ ಐಪಿಸಿ	೨೮-೨-೧೯೮೬

ಎರಡೂ ಪಕ್ಷದವರಲ್ಲಿ ಕಾನೂನು ಬಾಹಿರ ಹಾಗೂ ಅಕ್ರಮವಾದ ಚಟುವಟಿಕೆಗಳು ಇದ್ದುದರಿಂದ ದಿನಾಂಕ ೪-೩-೧೯೮೬ರಂದು ಆರಕ್ಷಕ ಉಪ ಅಧೀಕ್ಷಕರವರು ತೆರದಾಳ್ ಪೋಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್‌ರವರಿಗೆ ೨ ಪಕ್ಷದವರ ಮೇಲೆ ಕಲಂ ೧೦೭ ಮತ್ತು ೧೫೧ ಸಿಆರ್‌ಪಿಸಿ ಪ್ರಕಾರ ಕ್ರಮ ತೆಗೆದುಕೊಳ್ಳಲು ನಿರ್ದೇಶನ ನೀಡಿದರು. ಆದರ ಪ್ರಕಾರ ಪೋಲೀಸ್ ಸಬ್ ಇನ್ಸ್‌ಪೆಕ್ಟರ್‌ರವರು ದಿನಾಂಕ ೪-೩-೧೯೮೬ರಂದು ಕಲಂ ೧೫೧ ಸಿಆರ್‌ಪಿಸಿ ಪ್ರಕಾರ ೨ ಪಕ್ಷದವರ ಮೇಲೆ ಗುನ್ನೆಯೊಂದನ್ನು ನೋಂದಾಯಿಸಿದರು. ಮಂತ್ತು ಇಂಚಿಗೇರಿಮತನ ಅಪಾಯಕರವಾದ ಕಲ್ಲಪ್ಪ ಉಗಾರ್‌ರವರ ಬೆಂಬಲ ಪಡೆದ ವಕೀಲ ಎಲ್.ಟಿ. ಕೋಟಿಯಾಲ್‌ರವರನ್ನು ಕಲಂ ೧೫೧ ಸಿಆರ್‌ಪಿಸಿ ಪ್ರಕಾರ ಅದೇದಿನ ರಾತ್ರಿ ಸುಮಾರು ೯-೩೦ ಗಂಟೆ ಸಮಯದಲ್ಲಿ ದಸ್ತಗಿರಿ ಮಾಡಿ ದಿನಾಂಕ ೫-೩-೧೯೮೬ ಸುಮಾರು ಮಧ್ಯಾಹ್ನ ೧ ಘಂಟೆ ಸಮಯದಲ್ಲಿ ತಾಲ್ಲೂಕು ಎಕ್ಸಿಕ್ಯೂಟೀವ್ ಮ್ಯಾಜಿಸ್ಟ್ರೇಟ್‌ರವರ ಮುಂದೆ ಹಾಜರ್‌ಪಡಿಸಲಾಯಿತು. ಶಾಂತಿಗೆ ಧಕ್ಕೆಯಾಗುವುದನ್ನು ತಪ್ಪಿಸಲು ಪೋಲೀಸ್ ಸಬ್-ಇನ್ಸ್‌ಪೆಕ್ಟರ್‌ರವರು ಕಾನೂನು ಪ್ರಕಾರ ಕ್ರಮ ತೆಗೆದುಕೊಂಡಿದ್ದಾರೆ. ಮೇಲ್ಕಂಡ ವಕೀಲ ಕೋಟಿಯಾಲ್‌ರವರ ಅಕ್ರಮ ಚಟುವಟಿಕೆಗಳ ಬಗ್ಗೆ ಪ್ರಶ್ನಿಸಿದಾಗ ದುರ್ವರ್ತನೆಯಿಂದ ನಡೆದುಕೊಂಡರೆಂದೂ, ದಿನಾಂಕ ೨-೧೧-೧೯೮೫ರಂದು ಜಮಖಂಡಿಯ ಆರಕ್ಷಕ ಉಪ ಅಧೀಕ್ಷಕರವರು ಸದರಿ ವಕೀಲರು ಹೆಲ್ಮೆಟ್ ಅನ್ನು ಧರಿಸದೆ ಮೋಟಾರ್ ಸೈಕಲ್‌ನಲ್ಲಿ ಅಲಗೂರು ರಸ್ತೆಯಲ್ಲಿ ಹೋಗುತ್ತಿದ್ದಾಗ ಮೊಕದ್ದಮೆಯನ್ನು ನೋಂದಾಯಿಸಿ, ಜಮಖಂಡಿಯ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಹಾಜರುಪಡಿಸಿದಾಗ ನ್ಯಾಯಾಲಯವು ಎಚ್ಚರಿಕೆ ನೀಡಿದೆ. ಕೋಟಿಯಾಲ್‌ರವರು ಜಮಖಂಡಿಯಿಂದ ಬಂದವರಾಗಿ ಅಲ್ಲಿ ವಕೀಲ ವೃತ್ತಿಯನ್ನು ಕೈಗೊಂಡಿರುವುದರಿಂದ ಇತರ ಬಾರ್‌ನ ಸದಸ್ಯರು ಅವರಿಗೆ ಸಹಾನುಭೂತಿ ತೋರಿಸಲು ನ್ಯಾಯಾಲಯಗಳಿಗೆ ಬಹಿಷ್ಕಾರ ಹಾಕಿದರು. (ಈ ಸಂದರ್ಭದಲ್ಲಿ ಸೂಚಿಸುವುದೇನೆಂದರೆ ಕೋಟಿಯಾಲ್‌ರವರು ಬನಹಟ್ಟಿಯ ವಕೀಲರಾದ ಶ್ರೀ ಕೆರೂರ್‌ರವರ ವಿರುದ್ಧ ಅನಾವಶ್ಯಕವಾಗಿ ಮೊಕದ್ದಮೆ ಹೂಡಿದ್ದರಿಂದ ಬನಹಟ್ಟಿಯ ಬಾರಿನ ಸದಸ್ಯರು ವಕೀಲ ಕೋಟಿಯಾಲ್‌ರವರಿಗೆ ಬಹಿಷ್ಕಾರ ಹಾಕಿದರು). ಆದರೆ ಎಲ್ಲಾ ವಕೀಲರೂ ದಿನಾಂಕ ೧೭-೩-೧೯೮೬ರಂದು ಬಹಿಷ್ಕರಿಸುವುದನ್ನು ಹಿಂತೆಗೆದುಕೊಂಡು ನ್ಯಾಯಾಲಯಗಳಿಗೆ ಹಾಜರಾಗುತ್ತಿದ್ದಾರೆ.